**ಓ ಎಸ್ ನಂಃ 17/2017**

**ಪಿ. ಡಬ್ಲ್ಯೂ ಃ 1**

**ದಿಃ 23.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿ 6 ರಿಂದ 13 ರವರ ಪರ ಶ್ರೀ ಕೆ ಎಸ್ ಪಿ ವಕೀಲರಿಂದ ಃ**

2016 ರಲ್ಲಿ ನಮ್ಮ ಸ್ವತ್ತನ್ನು ಗ್ರಾಮ ಠಾಣಾಕ್ಕೆ ಸೇರಿಸಿದ್ದರಿಂದ ನಾವು ದಾವೆ ಮಾಡಿದ್ದೇವೆ. ದಾವಾ ಸ್ವತ್ತಿನ ಸ.ನಂ. 165/1 ಇದೆ ಅದರಲ್ಲಿ 14 ಗುಂಟೆ ಸ್ವತ್ತಿಗಾಗಿ ದಾವೆ ಮಾಡಿದ್ದೇವೆ. ನಮಗೆ ಜಮೀನು ಕೊಟ್ಟ ಗುಂಡೂರಾವ್ ಹಾಗೂ ಕಂದಾಯ ಇಲಾಖೆಯ ಎಲ್ಲ ಅಧಿಕಾರಿಗಳನ್ನು ಪಾರ್ಟಿ ಮಾಡಿದ್ದೇವೆ. ಜಮೀನಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ದಾವೆ ಮಾಡಿದ್ದೇನೆ. 14 ಗುಂಟೆ ಸ್ವತ್ತನ್ನು ನಮ್ಮ ಸ್ವತ್ತು ಎಂದು ಘೋಷಿಸಬೇಕೆಂದು ದಾವೆ ಮಾಡಿದ್ದೇನೆ. ಸರ್ಕಾರದವರು ಸ್ವಾಧೀನ ಕೊಡಬೇಕೆಂದು ನಾನು ಕೇಳಿದ್ದೇನೆ. ದಾವಾ ಸ್ವತ್ತು ಸರ್ಕಾರದ ಸ್ವತ್ತು ಎಂದು ನಾನು ಕೇಸ್ ಹಾಕಿದ್ದೇನೆ ಎಂದರೆ ಸರಿಯಲ್ಲ. ಸರ್ಕಾರ ಮಾಲೀಕತ್ವ ಹೊಂದಿರುವುದರಿಂದ ಅವರನ್ನು ಪಾರ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾವೇ ಮಾಲೀಕರಿರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ.

ದಾವೆ ಹಾಕುವಾಗ ದಾವಾ ಸ್ವತ್ತಿನ ಬೆಲೆ ಗೊತ್ತಿರಲಿಲ್ಲ. ನಂತರ ಎಕರೆಗೆ 20 ಲಕ್ಷ ಬೆಲೆ ಬಾಳುತ್ತದೆ ಎಂದು ಗೊತ್ತಾಯಿತು. ಕೇಸ್ ಹಾಕುವ ಸಮಯದಲ್ಲಿ ದಾವಾ ಸ್ವತ್ತಿನ ಬೆಲೆ 8 ರಿಂದ 9 ಲಕ್ಷ ಆಗುತ್ತಿತ್ತು ಎಂದರೆ ಸರಿ. ಅದರ ಪ್ರಕಾರ ನ್ಯಾಯಾಲಯಕ್ಕೆ ಕೋರ್ಟ್ ಫೀ ಕೊಟ್ಟಿರುತ್ತೇನೆ. ದಾವೆ ಹಾಕುವ ಕಾಲಕ್ಕೆ ಒಂದು ಎಕರೆ ಜಮೀನಿನ ಬೆಲೆ ರೂ. 40 ಲಕ್ಷ ಇತ್ತು ಎಂದರೆ ಸರಿಯಲ್ಲ. ಆ ಬೆಲೆಗೆ ಅನುಗುಣವಾಗಿ ಕೋರ್ಟ್ ಫೀ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಊರಿನಲ್ಲಿ ನನಗೆ ಕಿರುಕುಳ ಕೊಡುತ್ತಿದ್ದವರನ್ನು ಸಹ ಈ ದಾವೆಯಲ್ಲಿ ಪಾರ್ಟಿ ಮಾಡಿದ್ದೇನೆ. ದಾವಾ ಸ್ವತ್ತು ನಮ್ಮ ಸ್ವತ್ತು ಎಂದು ಸಾರ್ವಜನಿಕರ ಮೇಲೆ ಕೇಸ್ ಮಾಡಿದ್ದೇನೆ. ಆ ಪ್ರಕಾರ ಕಾನೂನುಬದ್ದವಾಗಿ ದಾವೆ ಮಾಡಿಲ್ಲ ಎಂದರೆ ಸರಿಯಲ್ಲ.

ಪ್ರತಿವಾದಿ 5 ರವರು ಈಗ ಬದುಕಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವೆ ಹಾಕುವ ಸಮಯದಲ್ಲಿಯೂ ಅವರು ಬದುಕಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನಮ್ಮ

ಅಜ್ಜಿಯ ಕ್ರಯಪತ್ರದಲ್ಲಿರುವ ವಿಳಾಸ ಈ ದಾವೆಯಲ್ಲಿ ಕೊಟ್ಟಿದ್ದೇವೆ. ನನ್ನ ಅಜ್ಜಿ 5 ನೇ ಪ್ರತಿವಾದಿಯಿಂದ ಜಮೀನು ಕ್ರಯಕ್ಕೆ ತೆಗೆದುಕೊಂಡಿದ್ದರಿಂದ ಅವರನ್ನು ಪಾರ್ಟಿ ಮಾಡಿದ್ದೇವೆ. ವೆಂಕಟಮ್ಮ ನಮ್ಮ ಅಜ್ಜಿಯಾಗಬೇಕು. ಅವರಿಗೆ 4 ಜನ ಮಕ್ಕಳಿರುತ್ತಾರೆ. ಅವರೆಂದರೆ ಹನುಮಂತಯ್ಯ, ಬೊಮ್ಮಯ್ಯ, ಹುಚ್ಚಮ್ಮ ಮತ್ತು ಲಕ್ಷ್ಮಮ್ಮ ಇರುತ್ತಾರೆ.

1ನೆ ವಾದಿ ಲಕ್ಷ್ಮಮ್ಮ ನಮ್ಮ ತಾಯಿ ಇರುತ್ತಾರೆ. ದಿನಾಂಕಃ 12.05.1964 ರಲ್ಲಿ ನಮ್ಮ ಅಜ್ಜಿಗೆ ದಾವಾ ಸ್ವತ್ತು ಕ್ರಯವಾಗಿತ್ತು. ಅದನ್ನು 5ನೆ ಪ್ರತಿವಾದಿ ಬರೆದುಕೊಟ್ಟಿದ್ದರು. ಅದರಲ್ಲಿ ಸ.ನಂ. 165 ಇತ್ತು. ಅದು ಒಟ್ಟು ವಿಸ್ತೀರ್ಣ 5ಎಕರೆ 12 ಗುಂಟೆ ಇತ್ತು. ನಮಗೆ 3 ಎಕರೆ 12 ಗುಂಟೆ ಮಾತ್ರ ಕ್ರಯವಾಗಿದೆ, ಇನ್ನುಳಿದ 2 ಎಕರೆಯಲ್ಲಿ ನಾವು ಸ್ವಾಧೀನದಲ್ಲಿದ್ದೇವೆ. ಕ್ರಯಪತ್ರದಲ್ಲಿ ಉಳಿಕೆ ಸ್ವತ್ತನ್ನು ನಿಮ್ಮ ಸ್ವಾಧೀನಕ್ಕೆ ಕೊಟ್ಟಿರುತ್ತೇವೆ ಎಂದು ಬರೆದಿಲ್ಲ. ಒಟ್ಟು ಚೆಕ್ ಬಂದಿ ಹಾಕಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಕ್ರಯಪತ್ರದಲ್ಲಿ ಇರುವ ಚೆಕ್ ಬಂದಿ 5 ಎಕರೆ 12 ಗುಂಟೆಗೆ ಇರುತ್ತದೆ. ಆ ರೀತಿ ಇರುವ ಕ್ರಯಪತ್ರವನ್ನು ನಾನು ನ್ಯಾಯಾಲಯದ ಮುಂದೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಕ್ರಯಪತ್ರದ ಚೆಕ್ ಬಂದಿಯನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಕ್ರಯಪತ್ರದಲ್ಲಿ ಪಶ್ಚಿಮಕ್ಕೆ ಇದೇ ಸ.ನಂಬರಿನ ಉಳಿಕೆ ಜಮೀನು ಮತ್ತು ರಸ್ತೆ ಎಂದು ಇದೆ ಎಂದರೆ ಸರಿ. ನಮ್ಮ ಅಜ್ಜಿಗೆ 3 ಎಕರೆ 12 ಗುಂಟೆ ಮಾತ್ರ ಕ್ರಯಪತ್ರವಾಗಿದೆ ಎಂದು ಬರೆದಿದೆ ಎಂದರೆ ಸರಿ. ಬಾಕಿ 2 ಎಕರೆ ಜಮೀನು ಸರ್ಕಾರಿ ಸ್ವಾಧೀನಕ್ಕೆ ಕೊಟ್ಟಿದ್ದು ಎಂದರೆ ಸರಿಯಲ್ಲ. ಅದರಲ್ಲಿ 3 ಎಕರೆ 12 ಗುಂಟೆ ಪೈಕಿ 1 ಎಕರೆ 26 ಗುಂಟೆಯನ್ನು ದಿನಾಂಕ ಃ 15.05.1964 ರಂದು ದಾಸಪ್ಪ ಇವರಿಗೆ ಕ್ರಯಕ್ಕೆ ಕೊಟ್ಟಿದ್ದಾರೆ ಎಂದರೆ ಸರಿ.

ದಾಸಪ್ಪ ಇವರಿಗೆ ಆದ ಕ್ರಯಪತ್ರವನ್ನು ಕೊಟ್ಟಿಲ್ಲ. ಆ ಕ್ರಯಪತ್ರದಲ್ಲಿ ಉತ್ತರಕ್ಕೆ ಗ್ರಾಮ ಠಾಣಾಕ್ಕೆ ಭೂ ಸ್ವಾಧೀನವಾಗಿರುವ ಜಮೀನು ಎಂದು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆ ಕ್ರಯಪತ್ರವನ್ನು ನಮಗೆ ತೊಂದರೆ ಆಗುತ್ತದೆ ಎಂಬ ಕಾರಣಕ್ಕೆ ಅದನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದರಲ್ಲಿ ದಾಸಪ್ಪ ಇವರಿಗೆ ಜಮೀನು ಕೊಟ್ಟ ನಂತರ 1

ಎಕರೆ 26 ಗುಂಟೆ ನಮ್ಮ ಅಜ್ಜಿಯ ಹೆಸರಿನಲ್ಲಿ ಉಳಿದಿತ್ತು ಎಂದರೆ ಸರಿ. ಅದು ನಮ್ಮ ಕುಟುಂಬಕ್ಕೆ ಸೀಮಿತವಾದ ಸ್ವತ್ತು ಎಂದರೆ ಸರಿ. ಅದನ್ನು ನಮ್ಮ ಅಜ್ಜಿಯ ಎಲ್ಲ ಮಕ್ಕಳು ಸೇರಿ ಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಆ ಭಾಗದ ಪ್ರಕಾರ ನಾವು ಸ್ವಾಧೀನದಲ್ಲಿರುತ್ತೇವೆ ಎಂದರೆ ಸರಿ. 3 ಎಕರೆ 12 ಗುಂಟೆ ಪೈಕಿ ಕ್ರಯ, ವಿಭಾಗಪತ್ರಗಳು ಆಗಿವೆ ಎಂದರೆ ಸರಿ. ಬಾಕಿ ಉಳಿದ 2

ಎಕರೆಯನ್ನು 5 ನೆ ಪ್ರತಿವಾದಿಯಾಗಲಿ ಅಥವಾ ಸರ್ಕಾರವಾಗಲಿ ನಮಗೆ ಹಕ್ಕು ವರ್ಗಾವಣೆ ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ದೊಡ್ಡಪ್ಪ ಮತ್ತು ನನ್ನ ತಂದೆ ನಮ್ಮ ಸಂಬಂಧಿಕರ ವಿರುದ್ದ ಒಂದು ದಾವೆ ಮಾಡಿದ್ದರು, ಅದರ ನಂಬರ್ ನನಗೆ ಗೊತ್ತಿಲ್ಲ. ಸರ್ಕಾರದ ವಿರುದ್ದ ಯಾವುದೆ ದಾವೆ ಮಾಡಿಲ್ಲ. ನಿ ಪಿ 51 ಆ ದಾವೆಯ ಡಿಕ್ರಿ ಇರುತ್ತದೆ ಎಂದರೆ ಸರಿ. ಆ ದಾವೆಯಲ್ಲಿ 2 ಎಕರೆಯನ್ನು ಸೇರಿಸಿ ಹಾಕಿಲ್ಲ ಎಂದರೆ ಸರಿಯಲ್ಲ. ನಿ ಪಿ 51 ರ ಪಶ್ಚಿಮಕ್ಕೆ ಉಳಿಕೆ ಜಮೀನು ಮತ್ತು ರಸ್ತೆ ಎಂದು ಬರೆದಿದೆ ಎಂದರೆ ಸರಿಯಲ್ಲ. ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಎಕರೆ ಸ್ವತ್ತು ಸರ್ಕಾರದಿಂದ ಅಥವಾ 5 ನೆ ಪ್ರತಿವಾದಿಯಿಂದ ನಮಗೆ ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ 2 ಎಕರೆ ಖಾತೆ ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಅದನ್ನು ನಾವು ಸ್ವಾಧೀನದಲ್ಲಿರುವುದನ್ನು ನೋಡಿ ಮಾಡಿದ್ದಾರೆ. ಅದನ್ನು ನಮ್ಮ ಅಜ್ಜಿ ಮಾಡಿಸಿಕೊಂಡಿದ್ದರು. ಅದರ ಬಗ್ಗೆ ನನಗೆ ಮಾಹಿತಿ ಇಲ್ಲ. 2 ಎಕರೆ ಜಮೀನಿನ ಪೂರ್ವಕ್ಕೆ ಹನುಮಂತಯ್ಯ ಇವರ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಹನುಮಂತಯ್ಯ ಮತ್ತು ನೀರಗಂಟಿ ನೌಕರಿ ಜಮೀನು ಮತ್ತು ದಕ್ಷಿಣಕ್ಕೆ ದಾಸಪ್ಪನ ಜಮೀನು ಇರುತ್ತದೆ. ನಮಗೆ ಆ ರೀತಿ ಹಕ್ಕು ವರ್ಗಾವಣೆ ಆದ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಿ ಪಿ 49 ರ ಪ್ರಕಾರ ತಹಶೀಲ್ದಾರ್ ಅವರು ಸ್ವತಃ ಆರ್ ಆರ್ ಟಿ ಪ್ರಕರಣವನ್ನು ದಾಖಲೆಸಿದ್ದರು ಎಂದರೆ ಸರಿ. ಆ ಕೇಸ್ ನಲ್ಲಿ ನಾವು ಹಾಜರಾಗಿದ್ದೇವು ಎಂದರೆ ಸರಿ. ನಮಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಹಾಜರುಪಡಿಸಿದ್ದೇವು ಎಂದರೆ ಸರಿ. ಆ ಸಮಯದಲ್ಲಿ ಸ್ಥಳ ಪರಿಶೀಲನೆ ಮಾಡಿದ್ದರು ಎಂದರೆ ಸರಿ. ಸ್ಥಳ ಮಹಜರ್ ಮಾಡುವ ಸಮಯದಲ್ಲಿ ಸಾರ್ವಜನಿಕರು ಹಾಜರಿದ್ದರು ಎಂದರೆ ಸರಿ. ನಾನು ಹಾಕಿರುವ

14 ಗುಂಟೆ ದಾವಾ ಸ್ವತ್ತು 2 ಎಕರೆಯ ಸರ್ಕಾರಿ ಸ್ವತ್ತಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೂಲ ಸ.ನಂ. 165 ಎಂದರೆ ಸರಿ. ಅದರಲ್ಲಿ 1 ರಿಂದ 10 ಪೋಡಿಗಳಾಗಿವೆ ಎಂದರೆ ಸರಿ. ಅದರಲ್ಲಿ ಪೋಡ್ ನಂಬರ್ 1 ಮತ್ತು 2 ನ್ನು ಹೊರತುಪಡಿಸಿ ಉಳಿದ ಪೋಡಿಗಳು ಅಕ್ರಮವಾಗಿ ಆಗಿವೆ ಎಂದು ರದ್ದು ಮಾಡಿದ್ದರು ಎಂದರೆ ಸರಿ. ಓ ಎಸ್ 16/2017 ಮತ್ತು ಈ ದಾವೆಯ ಸ್ವತ್ತು ಆ 2 ಎಕರೆಯಲ್ಲಿ ಬರುತ್ತವೆ ಎಂದರೆ ಸರಿ. ಆ 2 ಎಕರೆಯಲ್ಲಿ ಸಾಕಷ್ಟು ಜನ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿ. ಅಲ್ಲಿ ಅವರು ಮನೆ ಕಟ್ಟಿಕೊಂಡು ಸುಮಾರು 50 ರಿಂದ 60

ವರ್ಷಗಳಾಗಿವೆ. ಅವುಗಳನ್ನು ನಮ್ಮ ಅಜ್ಜಿ ಯಿಂದ ಕ್ರಯಕ್ಕೆ ಪಡೆದು ಕಟ್ಟಿಕೊಂಡಿದ್ದಾರೆ. ಅಲ್ಲಿ ಸಾರ್ವಜನಿಕ ಸ್ಥಳವಾಗಿದ್ದರಿಂದ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಮಗೆ ಬರೆದುಕೊಡಲು ಯಾವುದೆ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ.

ತಹಶೀಲ್ದಾರ್ ಇವರ ಆದೇಶಕ್ಕೆ ವಿರುದ್ದವಾಗಿ ನಾವು ದಾವೆ ಮಾಡಿದ್ದೇವೆ ಎಂದರೆ ಸರಿ. ನಾವು ಹೈಕೋರ್ಟ್ ನಲ್ಲಿ ರಿಟ್ ಹಾಕಿದ್ದೇವು ಎಂದರೆ ಸರಿ. ರಿಟ್ ನ್ನು ಸರ್ಕಾರದ ವಿರುದ್ದ ಹಾಕಿಲ್ಲ. ತಹಶೀಲ್ದಾರ್ ಇವರ ಆದೇಶವನ್ನು ಪ್ರಶ್ನಿಸಿ ಎ ಸಿ ನ್ಯಾಯಾಲಯದಲ್ಲಿ ಅಪೀಲು ಮಾಡಿದ್ದೇವು ಎಂದರೆ ಸರಿ. ಆ ಜಮೀನಿನಲ್ಲಿ ನಮಗೆ ಹಕ್ಕು ಕೊಡಿ ಎಂದು ಕೇಳಿಲ್ಲ ಎಂದರೆ ಸರಿಯಲ್ಲ. ಈ ದಾವೆಯನ್ನು ಹೊರತುಪಡಿಸಿ ಸರ್ಕಾರವನ್ನು ಪಾರ್ಟಿ ಮಾಡಿ ಬೇರೆ ಯಾವುದೆ ದಾವೆ ಮಾಡಿಲ್ಲ. ನಿ ಪಿ 51 ರಲ್ಲಿಯೂ ಸಹ ಸರ್ಕಾರ ಪಾರ್ಟಿ ಇರುವುದಿಲ್ಲ ಎಂದರೆ ಸರಿ. ಸ.ನಂ. 165/1 ಮತ್ತು 165/2 ಇವುಗಳಿಗೆ ಮಾತ್ರ ಕಂದಾಯ ಕಟ್ಟಿದ್ದೇವೆ ಎಂದರೆ ಸರಿ. ನಿ ಪಿ 74 ರ ಪ್ರಕಾರ ನಮ್ಮ ದೊಡ್ಡಪ್ಪನ ಮಗ ಕಾಂತರಾಜು ಸ.ನಂ. 165 ರಲ್ಲಿ 2 ಎಕರೆ ಭೂ ಸ್ವಾಧೀನ ಆದ ಬಗ್ಗೆ ದಾಖಲೆ ಒದಗಿಸಬೇಕೆಂದು ಮಾಹಿತಿ ಹಕ್ಕಿನ ಕೆಳಗೆ ಅರ್ಜಿ ಕೊಟ್ಟಿರುತ್ತಾರೆ ಎಂದರೆ ಸರಿ. ಆ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ನಿ ಪಿ 75 ರಲ್ಲಿ 3 ಎಕರೆ 12 ಗುಂಟೆ ಜಮೀನಿಗೆ ಮಾತ್ರ ಪಟ್ಟಾ ಬುಕ್ ಇರುತ್ತದೆ ಎಂದರೆ ಸರಿ. ನಿಪಿ 76 ವಾದಿಗಳ ಹೆಸರಿನಲ್ಲಿ ಇರುವ ಪಟ್ಟಾ ಬುಕ್ ಎಂದರೆ ಸರಿ.

ನಿ ಪಿ 77 ಇದು ರದ್ದು ಮಾಡಿದ ಜಮೀನಿನ ಕಂದಾಯ ರಶೀದಿ ಎಂದರೆ ಸರಿ. ನಿ ಪಿ 78 ಮತ್ತು ನಿ ಪಿ 79 ಇವುಗಳು ಸ.ನಂ. 165 ಕ್ಕೆ ಸಂಬಂಧಿಸಿದವುಗಳು ಎಂದು

ಬರೆದಿಲ್ಲ ಎಂದರೆ ಸರಿಯಲ್ಲ. ನಿ ಪಿ 80 ರದ್ದಾದ ಪೋಡಿಗೆ ಸಂಬಂಧಿಸಿದ ಕ್ರಯಪತ್ರ ಎಂದರೆ ಸರಿ. ರದ್ದಾಗುವ ಮೊದಲೇ ಕ್ರಯಪತ್ರವಾಗಿತ್ತು ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 81 ಸಹ ಸ.ನಂ. 165/1 ರ ಕ್ರಯಪತ್ರ ಇರುತ್ತದೆ ಎಂದರೆ ಸರಿ. ನಿಪಿ 83 ರಲ್ಲಿ ಇರುವ ವ್ಯಕ್ತಿಗಳು ನಮ್ಮ ದೊಡ್ಡಪ್ಪನ ಮಕ್ಕಳಿರುತ್ತಾರೆ ಎಂದರೆ ಸರಿ. ಅದರಲ್ಲಿ ಇರುವ ಸ್ವತ್ತು ಸರ್ಕಾರಿ ಸ್ವತ್ತು ಅಲ್ಲ ಎಂದರೆ ಸರಿ. ನಿ ಪಿ 85 ರಿಂದ ನಿ ಪಿ 96 ರವರೆಗಿನ ಪೋಟೋಗಳು ಸ.ನಂ. 195/1 ರಲ್ಲಿ ಇರುವ ಮನೆಯ ಪೋಟೋಗಳು ಎಂದರೆ ಸರಿ.

ಸ.ನಂ.165/9 ರಲ್ಲೀನ 14 ಗುಂಟೆ ಇರುವ ಪೋಡಿ ನಂಬರ್ ರದ್ದಾಗಿದೆ ಎಂದರೆ ಸರಿ. ಪೋಡಿ ರದ್ದು ಮಾಡಿದ ತಹಶೀಲ್ದಾರ್ ಆದೇಶ ಯಾವುದೆ ನ್ಯಾಯಾಲಯದಿಂದ ರದ್ದು ಆಗಿಲ್ಲ

ಎಂದರೆ ಸರಿ. ನಾವು ಖರೀದಿ ಕೊಟ್ಟವರಿಗೆ ಮನೆಯ ಕಟ್ಟುವ ಉದ್ದೇಶದಿಂದ ಪಾಯ ಹಾಕಿರುತ್ತಾರೆ ಅದನ್ನು ಷೆಡ್ಯೂಲ್ ನಲ್ಲಿ ತೋರಿಸಿದ್ದೇವೆ. ಅದು ನಮ್ಮ ಸ್ವತ್ತು ಇರುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ತಹಶೀಲ್ದಾರ್ ಇವರು ಸರ್ಕಾರಿ ಸ್ವತ್ತು ಎಂದು ಆದೇಶ ಮಾಡಿದ್ದಕ್ಕೆ ದಾವೆ ಮಾಡಿದ್ದೇನೆ. ಈಗಲೂ ಸಹ 2 ಎಕರೆ ಸ್ವತ್ತು ಸರ್ಕಾರಿ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ 15 ಗುಂಟೆ ರಸ್ತೆಗಾಗಿ ಹೋಗಿದೆ. ಅದರ ಪರಿಹಾರವನ್ನು ಪಡೆದಿದ್ದಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗೂ ಮತ್ತು ನಮಗೂ ಯಾವುದೆ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**